ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 29.01.2024.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಎ.ಡಿ. ವಕೀಲರಿಂದಃ**

ದಾವಾ ಸ್ವತ್ತು ಅಷ್ಟೊಂದು ಫಲವತ್ತೆತೆಯಿಂದ ಕೂಡಿಲ್ಲ ಹಾಗೂ ಏರು ಮತ್ತು ಇಳಿಜಾರಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 2017 ನೇ ಸಾಲಿನಲ್ಲಿ ತುಂಬಾ ಉಪಯೋಗವಿಲ್ಲದ ಜಮೀನು ಆಗಿತ್ತು ಎಂದರೆ ಸರಿಯಲ್ಲ. ನನ್ನ ತಂದೆ ಹುಚ್ಚ ಇರುವುದಿಲ್ಲ ಎಂದರೆ ಸರಿಯಲ್ಲ, ಆದರೆ ಕಡಿಯುತ್ತಾನೆ. 2017 ರಲ್ಲಿ ದಾವಾ ಸ್ವತ್ತು ಇಂತಿಷ್ಟು ಬೆಲೆ ಬಾಳುತ್ತದೆ ಎಂದು, ಮಾರುಕಟ್ಟೆ ಬೆಲೆ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನನ್ನ ತಂದೆ ನಮ್ಮ ಕುಟುಂಬದ ಪ್ರಮುಖ ಇರುವ ಕಾರಣ ಆತನಿಗೆ ಕುಟುಂಬದ ಅಡೆಚಣೆ ಸಲುವಾಗಿ ದಾವಾ ಸ್ವತ್ತುನ್ನು ಮಾರಾಟ ಮಾಡುವ ಅಧಿಕಾರ ಇದೆ ಎಂದರೆ ಸಾಕ್ಷಿ ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ.

ನಮಗೆ ಮಾರಾಟದ ಯಾವುದೇ ಮಾಹಿತಿ ಇಲ್ಲ ಎಂದು ಹೇಳುವ ವಿಷಯ ಸುಳ್ಳು ಇದೆ ಎಂದರೆ ಸರಿಯಲ್ಲ. ಅಕ್ಟೊಬರ್ 2020 ರಲ್ಲಿ ಮಾರಾಟ ಮಾಡಿದ ವಿಷಯ ನಮಗೆ ಗೊತ್ತಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 25.08.2017 ರಿಂದ 2 ನೇ ಪ್ರತಿವಾದಿ ದಾವಾ ಸ್ವತ್ತಿನ ದೆಕರೆಕಿಯನ್ನು ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಅಕ್ಟೊಬರ್ 2020 ರಂದು ಖರೀದಿ ಬಗ್ಗೆ ಗೊತ್ತಾಗಿರುತ್ತದೆ ಎಂದು ನಾನು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ನನ್ನ ತಂದೆ ಬರೆದುಕೊಟ್ಟ ಕ್ರಯ ಪತ್ರ ಕಾನೂನು ಬದ್ಧವಾಗಿ ಹಾಗೂ ಅದು ನಮ್ಮೆಲ್ಲರಿಗೂ ಬಂಧನಕಾರಿಯಾಗಿರುತ್ತದೆ ಎಂದರೆ ಸರಿಯಲ್ಲ.

ನಮ್ಮ ಅಣ್ಣ-ತಮ್ಮಂದಿರ ಮದ್ಯ ಯಾವುದೇ ವೈಮನಸ್ ಇರುವುದಿಲ್ಲ. ಪಿಡಬ್ಲ್ಯೂ-01 ರವರು ಒಪ್ಪಿಕೊಂಡಿರುವ ಸಂಗತಿಗಳನ್ನು ಮುಚ್ಚಿಹಾಕುವ ಸಲುವಾಗಿ ನಾನು ಈ ಕೇಸಿನಲ್ಲಿ ಪುನಃ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅನಾವಶ್ಯಕ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ._

<u>**ಮರು ವಿಚಾರಣೆಃ** ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**